**KARNATAKA LOKAYUKTA**

No. UPLOK-2 /DE/680/2017/ARE-16
*(Encl: Recommendation & original Report of Inquiry Officer with connected records)*

Dr.B.R.Ambedkar Veedhi,
Multi Storied Building,
Bengaluru,
dated: 16/12/2019.

**To,**

Shri Kumar Naik G, IAS,
Principal Secretary to Government
Social Welfare Department,
Vikasa Soudha,
Bengaluru-560001.

Respected Sir,

**Sub :** Departmental inquiry against, Sri.R.Shekarappa, Retd., District Manager and (2) Sri.H.V.Damodara, Taluk Development Officer, Dr.B.R.Ambedkar Development Limited, Chikkamagaluru-reg.

**Ref :** Government Order No. ಅಂಅನಿ/ಶಿಆ/ಇವಿ/02/2017-18 ದಿನಾಂಕ 27.04.2017

* * *

With Reference to the above, I am directed to forward herewith the recommendation of Hon'ble Uplokayukta, State of Karnataka, dated 13.12.2019 along with the report of inquiry Officer and relevant records as noted below:

| Sl. No. | Particulars of Documents | Page Nos. |
|---|---|---|
| | Recommendation dated 13/12/2019 of Hon'ble Upalokayukta along with inquiry report | One sealed cover |
| **File 1** | Order Sheet File (Original). | 1-12 |
| **File 2** | **Documents containing :** | |
| | I. 12(3) report of Hon'ble Upalokayukta-II, dated: 30/01/2017 (xerox). | 13-16 |
| | II. Government Order No.ಅಂ.ಅನಿ/ಸಿಆ/ಇವಿ/02/2017-18/2214 ದಿನಾಂಕ: 27/04/2017. (xerox). | 17-19 |
| | III. Nomination order No: Uplok-2/DE/680/2017 dated: 23/05/2017of Hon'ble Upalokayukta-II, Bangalore (Xerox) | 20 |
| | IV. Served copy of Articles of charges dtd.8/05/2018, 8 pages (Original) | 21-28 |
| | V. First Oral Statement of DGO-2 dtd:8/6/2018 (Original) | 29 |
| | VI. Written statement of DGO-2 along with enclosures (Page No.30-33-original) (Page No.34 to 45 - true copy), page No.46 to 49- Xerox) | 30-49 |
| | VIII. Second oral statement of DGO-2 dt.29/07/2019, (original) | 50 |
| **File 3** | **Witness examined on behalf of the Disciplinary Authority** | |
| | **PW-1**: Sri.Shankar Naik, dt.24/06/2019, 5 pages (Original) | 51-55 |
| | **PW-2:** Sri.Channaiah dt.29/07/2019, (original) | 56 |
| | **Documents marked on behalf Disciplinary Authority (Ex.P1 to Ex.P.6)** | |
| | **Ex.P-1:** Complaint of Sri.Shankar Naik (original) | 57-58 |
| | **Ex.P-2:** Complaint Sri.Shankar Naik in form No.I | 59-60 |

| | | |
|---|---|---|
| | (original) dt.19/01/2015 | |
| | **Ex.P-3:** Complaint Sri.Shankar Naik in form No.II (original) dt.19/01/2015 | 61 |
| | **Ex.P-4:** Letter of AEE(E), dt.14/07/2014 addressed to Complainant, along with enclosures, 15 pages (Xerox) | 62-82 |
| | **Ex.P-5:** Letter addressed to DRE-1 from Complainant dt.21/11/2016 (page No.83-86- Original) (page No.87 to 106 xerox) | 83-106 |
| | **Ex.P-6**: letter of complainant addressed to DRE-1 dt.13/4/2015(original) | 107 |
| | **Witness examined on behalf of the DGO** | |
| **File 4** | **DW-1:** Sri. H.V.Damodara, dt.30/10/2019, 9 pages (Original) | 108-117 |
| | **Documents marked on behalf of the Disciplinary Authority** | |
| | **Ex.D-1:** Copy of letter of Sri.H.V.Damodara (DGO) addressed to DRE-1 dt.26/12/2015, 2pages (Xerox) | 118-119 |
| | **Ex.D-2:** Copy of Report of District Manager to Managing Director dt.21/4/2018( xerox) | 120-121 |
| | **Ex.D-3:** Beneficiaries list for the period 2011-12, 3 pages(Xerox) | 122-124 |
| | **Ex.D-4:** Copy of letter addressed to KEB to cancel the electrical sanction( Xerox) | 125 |
| | **Ex.D-5:** copy of letter of KEB cancelling electrical sanction(xerox) | 126 |
| | **Ex.D-6:** Report of DGO addressed to District Manager, (xerox) | 127 |
| | **Ex.D-7:** copy of document regarding pumpset issued to Sri.Samyanaika, (xerox) | 128 |
| | **Ex.D-8:** copy of service certificate issued to Sri.Samyanaika. (xerox) | 129 |

| | | |
|---|---|---|
| | **Ex.D-9:** copy of letter of receipt for deposit, (Xerox) | 130 |
| | **Ex.D-10:** Copy of letter of Chandranaika dt.27/10/2014 to Taluk Development Officer, Kadur (xerox) | 131 |

**INDEX**

Kindly acknowledge the receipt of the above said documents.

Yours faithfully,

(**C.Chandramallegowda**)
Registrar,
Karnataka Lokayukta,
Bengaluru.

Copy to the Addl.Registrar of Enquiries-16, Karnataka Lokayukta, Bengaluru., for information and further necessary action.

KARNATAKA LOKAYUKTA

No.UPLOK-2/DE/680/2017/ARE-16

Multi-storeyed Building,
Dr.B.R. AmbedkarVeedhi,
Bengaluru, dt.13.12.2019.

**RECOMMENDATION**

Sub:Departmental Enquiry against (1) Sri.R.Shekarappa, Retd., District Manager and (2) Sri.H.V.Damodara, Taluk Development Officer, Dr.B.R.Ambedkar Development Limited, Chickmagalur-reg.

Ref: 1. Government Order No. ಅಂ.ಅನಿ/ಸಿಆ/ಇವಿ/02/2017-18/2214 ದಿನಾಂಕ: 27/04/2017.
2. Nomination Order No. UPLOK-2/DE/680/2017 Bangalore, dated 23.5.2017.
3. Enquiry Report dated 12.12.2019 of Additional Registrar of Enquiries-16, Karnataka Lokayukta, Bangalore.

The Government by its order dated 27.4.2017, initiated disciplinary proceedings against (1) Sri.R.Shekharappa, District Manager, Dr. B.R. Ambedkar Development Corporation (Retired) and (2) Sri. H. V. Damodara, Taluk Development Officer, Dr. B.R. Ambedkar Development Corporation, Davanagere [hereinafter referred to as the Delinquent Government Officials, for short 'DGOs 1 and 2'] and entrusted the departmental inquiry to this Institution.

2. This Institution, by Nomination Order No: UPLOK-2/DE/680/2017 dated 23.5.2017, nominated the Additional Registrar of Enquiries-11,

Karnataka Lokayukta, Bengaluru as the Inquiry Officer to frame charges and to conduct the departmental inquiry against the DGOs for the alleged charge of misconduct, said to have been committed by them. Subsequently by order No: Uplok-1 & 2/DE/Transfers/2019 dated 7.2.2019 Additional Registrar of Enquiries-16, Karnataka Lokayukta, Bengaluru, was re-nominated to continue the said enquiry.

3. The DGOs- (1) Sri.R.Shekharappa, District Manager, Dr. B. R. Ambedkar Development Corporation(Retired) and (2) Sri. H.V.Damodara, Taluk DEvelopment Officer, Dr.B.R.Am bedkar Development Corporation, Davanagere were tried for the following charges:-

> "ಒಂದನೆ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಆರ್.ಶೇಖರಪ್ಪ ರವರು ಚಿಕ್ಕಮಗಳೂರಿನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ ಮತ್ತು 2ನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಹೆಚ್.ವಿ.ದಾಮೋದರ ರವರು ಚಿಕ್ಕಮಗಳೂರಿನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ವತಿಯಿಂದ ಕೊಡಲಾಗುವ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬೋಳನಹಳ್ಳಿ, ತಾಂಡ್ಯ ಎಂಬಲ್ಲಿಗೆ ಸೇರಿದ ಪೀರ್ಯಾನಾಯ್ಕರವರ ಮಗನಾದ ಸೋಮ್ಲಾನಾಯ್ಕರವರ ಬಾಬ್ತು ಮೋಜಣಿ ಸಂಖ್ಯೆ.71ರಲ್ಲಿಯ ಜಮೀನಿನಲ್ಲಿ ಕೊಳವೆಬಾವಿಯನ್ನು ನಿರ್ಮಿಸುವ ಬಗ್ಗೆ ಈ ಆ.ಸ.ನೌ.ರವರುಗಳು ನಡಾವಳಿ ನಡೆಸಿದ್ದು, ಸದರಿ ಪೀರ್ಯಾನಾಯ್ಕರವರ ಮಗನಾದ ಸೋಮ್ಲಾನಾಯ್ಕರವರ ಬಾಬ್ತು ಮೋಜಣಿ ಸಂಖ್ಯೆ.71ರಲ್ಲಿಯ ಜಮೀನಿನಲ್ಲಿ ಕೊಳವೆಬಾವಿ ಕೊರೆಸುವ ಬದಲಾಗಿ, ಅದೇ ಊರಿನ ಮತ್ತೊಬ್ಬ ವ್ಯಕ್ತಿಯಾದ ಚಂದ್ರನಾಯ್ಕರವರ ಬಾಬ್ತು ಮೋಜಣಿ ಸಂಖ್ಯೆ 71/7ರಲ್ಲಿಯ ಜಮೀನಿನಲ್ಲಿ

ಕೊಳವೆಬಾವಿಯನ್ನು ಕೊರೆಸಿ, ಆ ಸಂಬಂಧವಾಗಿ 2ನೆ ಆಪಾದಿತ ಸರ್ಕಾರಿ ನೌಕರರು ದೃಢೀಕರಣ ಪತ್ರವನ್ನು ಒದಗಿಸಿ, ಆ ಮೂಲಕ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆ".

4. The Inquiry Officer, on proper appreciation of oral and documentary evidence has held that, the Disciplinary Authority has 'proved' the charge leveled against the DGOs (1) Sri.R. Shekharappa, District Manager, Dr.B .R.Ambedkar Development Corporation(Retired) and (2) Sri. H.V.Damodara, Taluk Development Officer, Dr.B.R.Am bedkar Development Corporation, Davanagere.

5. On reconsideration of report of Enquiry Officer and all other documents on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of DGOs furnished by the Inquiry Officer, DGO No. 1. Sri. R.Shekharappa, is retired from service on 31.3.2015 and DGO No. 2. Sri. H.V.Damodara, Taluk Development Officer, is due for retirement on 30.11.2024. It is seen from the report of the Enquiry Officer that, the DGO No.1. Sri. R. Shekharappa has been suffering from Paralysis stroke. Keeping in mind his role in the matter and his health condition, quantum of punishment is required to be determined.

7. Having regard to the nature of charge 'proved' against DGOs – (1) Sri.R. Shekharappa, District Manager, Dr.B.R.Ambedkar Development Corporation(Retired) and (2) Sri. H.V.Damodara, Taluk Development

Officer, Dr.B.R.Ambedkar Development Corporation, Davanagere and on consideration of the totality of circumstances:-

i. "it is hereby recommended to the Government to impose penalty of withholding 5% (Five percent) of pension payable to DGO-1, Sri.R.Shekharappa, District Manager, for a period of five years".

ii. "it is hereby recommended to the Government to impose penalty of withholding four annual increment payable to DGO-2, Sri. H.V.Damodara, Taluk Development Officer with cumulative effect".

8. Action taken in the matter shall be intimated to this Authority.

Connected records are enclosed herewith.

12-12-19

(JUSTICE B.S.PATIL)
Upalokayukta-2,
State of Karnataka,
Bengaluru.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-680/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 12/12/2019.

## ವಿಚಾರಣಾ ವರದಿ

ಉಪಸ್ಥಿತರು: ಸೆಲ್ವಕುಮಾರ್.ಸಿ, ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ವಿಷಯ: (1)ಶ್ರೀ ಆರ್.ಶೇಖರಪ್ಪ, ನಿವೃತ್ತ ಜಿಲ್ಲಾ ವ್ಯವಸ್ಥಾಪಕರು, ಮತ್ತು (2)ಶ್ರೀ.ಹೆಚ್.ವಿ.ದಾಮೋದರ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಿಕ್ಕಮಗಳೂರುರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: **1.ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್-7608/2015/ಡಿ.ಆರ್.ಇ-1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 30/01/2017.**
2.ಸರ್ಕಾರದ ಆದೇಶ ಸಂಖ್ಯೆ: ಅಂಅನಿ/ಸಿಆ/ಇವಿ/02/2017-18/2214, ದಿನಾಂಕ:27/04/2017.
3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ-680/2017, ಬೆಂಗಳೂರು ದಿನಾಂಕ: 23.05.2017.
4.Note No.Uplok-1 & 2/DE/Transfers/ 2019, dated 07.02.2019.

* * * *

1) ಈ ದೂರನ್ನು, ದೂರುದಾರರಾದ ಶ್ರೀ ಶಂಕರನಾಯ್ಕ ಬಿನ್ ಸೋಮ್ಲಾನಾಯ್ಕ, ಬೋಳನಹಳ್ಳಿ ತಾಂಡ್ಯ, ದೇವನೂರು ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರುರವರು ಆಪಾದಿತ ಸರ್ಕಾರಿ ನೌಕರರಾದ (1)ಶ್ರೀ ಆರ್.ಶೇಖರಪ್ಪ, ನಿವೃತ್ತ ಜಿಲ್ಲಾ ವ್ಯವಸ್ಥಾಪಕರು, ಮತ್ತು (2)ಶ್ರೀ.ಹೆಚ್.ವಿ.ದಾಮೋದರ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಿಕ್ಕಮಗಳೂರು (ಇನ್ನು ಮುಂದೆ ಆ.ಸ.ನೌ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುವುದಾಗಿ ಆಪಾದಿಸಿ ದೂರು ದಾಖಲಿಸಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 27/04/2017ರಂದು ಮಾನ್ಯ ಉಪಲೋಕಾಯುಕ್ತ-2ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-2ರವರು ದಿನಾಂಕ 23/05/2017ರಂದು ಅಪರ ನಿಬಂಧಕರು, ವಿಚಾರಣೆಗಳು-11ರವರಿಗೆ ವಿಚಾರಣೆ ಮಾಡಿ ವರದಿಯನ್ನು, ಉಲ್ಲೇಖ (3)ರಲ್ಲಿ ಕಾಣಿಸಿದಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು-11ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು-16ಕ್ಕೆ ವರ್ಗಾವಣೆಗೊಂಡಿರುತ್ತದೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌರವರುಗಳ ವಿರುದ್ಧ ದೋಷರೋಪಣೆ (Article of charges)ಅನ್ನು, ಅಪರ ನಿಬಂಧಕರು, ವಿಚಾರಣೆಗಳು-11ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ 29/05/2018ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ-1

4) ಒಂದನೆ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಆರ್.ಶೇಖರಪ್ಪ ರವರು ಚಿಕ್ಕಮಗಳೂರಿನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ ಮತ್ತು 2ನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಹೆಚ್.ವಿ.ದಾಮೋದರ ರವರು ಚಿಕ್ಕಮಗಳೂರಿನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ವತಿಯಿಂದ ಕೊಡಲಾಗುವ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬೋಳನಹಳ್ಳಿ, ತಾಂಡ್ಯ ಎಂಬಲ್ಲಿಗೆ ಸೇರಿದ ಪೀರ್‍ಯಾನಾಯ್ಕರವರ ಮಗನಾದ ಸೋಮ್ಲಾನಾಯ್ಕರವರ ಬಾಬ್ತು ಮೋಜಣಿ ಸಂಖ್ಯೆ.71ರಲ್ಲಿಯ ಜಮೀನಿನಲ್ಲಿ ಕೊಳವೆಬಾವಿಯನ್ನು ನಿರ್ಮಿಸುವ ಬಗ್ಗೆ ಈ ಆ.ಸ.ನೌ.ರವರುಗಳು ನಡಾವಳಿ ನಡೆಸಿದ್ದು, ಸದರಿ ಪೀರ್‍ಯಾನಾಯ್ಕರವರ ಮಗನಾದ ಸೋಮ್ಲಾನಾಯ್ಕರವರ ಬಾಬ್ತು ಮೋಜಣಿ ಸಂಖ್ಯೆ.71ರಲ್ಲಿಯ ಜಮೀನಿನಲ್ಲಿ ಕೊಳವೆಬಾವಿ ಕೊರೆಸುವ ಬದಲಾಗಿ, ಅದೇ ಊರಿನ ಮತ್ತೊಬ್ಬ ವ್ಯಕ್ತಿಯಾದ ಚಂದ್ರಾನಾಯ್ಕರವರ ಬಾಬ್ತು ಮೋಜಣಿ ಸಂಖ್ಯೆ 71/7ರಲ್ಲಿಯ ಜಮೀನಿನಲ್ಲಿ ಕೊಳವೆಬಾವಿಯನ್ನು ಕೊರೆಸಿ, ಆ ಸಂಬಂಧವಾಗಿ 2ನೆ ಆಪಾದಿತ ಸರ್ಕಾರಿ ನೌಕರರು ದೃಢೀಕರಣ ಪತ್ರವನ್ನು ಒದಗಿಸಿ, ಆ ಮೂಲಕ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ಮತ್ತು (iii)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆ.

## ಅನುಬಂಧ-2

## ದೋಷರೋಪಣೆಯ ವಿವರ

5) ದೂರುದಾರರಾದ ಶ್ರೀ.ಶಂಕರನಾಯ್ಕ ಬಿನ್ ಸೋಮ್ಲಾನಾಯ್ಕ, ಬೋಳನಹಳ್ಳಿ ತಾಂಡ್ಯ, ದೇವನೂರು ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರುಜಿಲ್ಲೆ ರವರು ತಮ್ಮ ದೂರಿನಲ್ಲಿ ಚಂದ್ರಾನಾಯ್ಕ ಎಂಬುವರು ದೂರುದಾರರ ತಂದೆಯಾದ ಸೋಮ್ಲಾನಾಯ್ಕರವರು ದೇವನೂರು ಗ್ರಾಮದ ಸರ್ವೆ ನಂ.71 ರಲ್ಲಿ ಹೊಂದಿರುವ 1 ಎಕರೆ 39 ಗುಂಟೆ ಜಮೀನಿಗೆ ಸಂಬಂದಪಟ್ಟ ದಾಖಲಾತಿಗಳನ್ನು ನಕಲಿ ಮಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದವರು ನೀಡುವ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ, ಚಂದ್ರಾನಾಯ್ಕರವರು ಹೊಂದಿರುವ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿಕೊಂಡು, ಅದಕ್ಕೆ ಸಂಬಂದಪಟ್ಟ ಸಬ್‌ಮರ್ಸಿಬಲ್ ಪಂಪ್, ಮೋಟಾರ್, ಪೈಪ್ ಮತ್ತು ಕೇಬಲ್ ಇವುಗಳನ್ನು ಪಡೆದುಕೊಂಡಿದ್ದು, ಮೋಜಣಿ ಸಂಖ್ಯೆ 71 ರ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ, ಎರಡನೆಯ ಆಪಾದಿತ ನೌಕರರು ಮೆಸ್ಕಾಂ ಸಂಸ್ಥೆಗೆ ಶಿಫಾರಸ್ಸು

ಮಾಡಿದ್ದು, ಈ ರೀತಿ ಶಿಫಾರಸ್ಸು ಮಾಡಿರುವುದು ತಪ್ಪೆಂದು ತಿಳಿಸಿ ದೂರು ನೀಡಿದ್ದರೂ ಎರಡನೆಯ ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

ದೂರುದಾರರು ಮಾಡಿರುವ ದೂರಿಗೆ ಸಂಬಂದಿಸಿದಂತೆ ಜಿಲ್ಲಾ ವ್ಯವಸ್ಥಾಪಕರು ತನಿಖೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ನಿಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು ಅವುಗಳನ್ನು ಪರಿಶೀಲಿಸಲಾಗಿ ಚಂದ್ರನಾಯ್ಕ ಬಿನ್ ಸಾಮ್ಯಾನಾಯ್ಕ ಬೋಳನಹಳ್ಳಿ ತಾಂಡದವರು ವಿದ್ಯುತ್ ಸಂಪರ್ಕಕ್ಕೆ ಅರ್ಜಿ ನೀಡುವಾಗ ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕ ರವರ ಪಹಣಿಯನ್ನು ನಿಡಿದ್ದು ಆ ಬಗ್ಗೆ ಸೂಕ್ತ ರೀತಿಯಲ್ಲಿ ದಾಖಲೆ ಪರಿಶೀಲಿಸದೆ ವಿದ್ಯುತ್ ಸಂಪರ್ಕ ಕೊಡಲು ಶಿಫಾರಸ್ಸು ಮಾಡಲಾಗಿರುವುದು ಮತ್ತು ಪೀರ್ಯಾನಾಯ್ಕ ರವರ ಮಗನಾದ ಸೋಮ್ಲಾನಾಯ್ಕ ರವರಿಗೆ ಸೇರಿದ ಮೋಜಣಿ ಸಂಖ್ಯೆ 71 ರಲ್ಲಿ ಕೊಳವೆ ಬಾವಿಯನ್ನು ಕೊರೆದಿರುವುದಾಗಿ ದೃಢೀಕರಣ ಪತ್ರವನ್ನು ನೀಡಿರುವುದು ನೀವು ಸಲ್ಲಿಸಿರುವ ಆಕ್ಷೇಪಣೆ ಮತ್ತು ಜಿಲ್ಲಾ ವ್ಯವಸ್ಥಾಪಕರು ಸಲ್ಲಿಸಿರುವ ವರದಿಯಲ್ಲಿ ಕಂಡು ಬಂದಿರುತ್ತದೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ನಂತರ ನೀವು ಕೊಟ್ಟಿರುವ ಆಕ್ಷೇಪಣೆಗಳನ್ನು ಗಮನಿಸಿ ನೋಡಲಾಗಿ, ನಿಮ್ಮ ಆಕ್ಷೇಪಣೆಗಳನ್ನು ಒಪ್ಪಲು ಅಸಾಧ್ಯವಾಗಿದ್ದು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ನೋಡಿದಾಗ, ಆಪಾದಿತ ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ನಿಷ್ಟೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ ನಿಯಮ 3(1) (ii) ಮತ್ತು (iii)ರಡಿಯಲ್ಲಿ ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡುಬಂದಿದ್ದರಿಂದ ಎದುರುದಾರರ ವಿರುದ್ದ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ದ ಶಿಸ್ತು ಕ್ರಮವನ್ನು ಜರುಗಿಸಲು ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ದ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

6) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ–2ರವರು ದಿನಾಂಕ 08/06/2018ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆ (First Oral Statement) ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ–2ರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ. ಆ.ಸ.ನೌ–1ರವರು ಪಾರ್ಶ್ವವಾಯು ಖಾಯಿಲೆಯಿಂದ ಬಳಲುತ್ತಿರುವುದಾಗಿ ಮತ್ತು ಪ್ರಯಾಣಿಸಲು ಸಹ ಸಾಧ್ಯವಿರುವುದಿಲ್ಲವೆಂದು ವರದಿಗೊಂಡಿರುವ ಆಧಾರದ ಮೇಲೆ ಅವರ ಪ್ರಥಮ ಮೌಖಿಕ ಹೇಳಿಕೆ ದಾಖಲಿಸಿರುವುದಿಲ್ಲ.

7) ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

8) ಆ.ಸ.ನೌ–1ರವರು ಅನಾರೋಗ್ಯದ ನಿಮಿತ್ತ ಗೈರು ಹಾಜರಾಗಿರುವುದರಿಂದ ಅವರ ರಕ್ಷಣಾ ಹೇಳಿಕೆ ಇಲ್ಲ ಎಂದು ದಿನಾಂಕ 17/11/2018ರಂದು ಆದೇಶಿಸಲಾಗಿರುತ್ತದೆ.

9) ಆ.ಸ.ನೌ–2ರವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ವಿವರಿಸುವುದೇನೆಂದರೆ, ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸಾಮ್ಯನಾಯ್ಕ ಬಿನ್ ಪೀರ್ಯಾನಾಯ್ಕ ಬೋಳನಹಳ್ಳಿ ಇವರ ಸರ್ವೇ ನಂ.73/1ರಲ್ಲಿನ 1 ಎಕರೆ 03 ಗುಂಟೆ ಭೂಮಿಯಲ್ಲಿ ಕೊಳವೆಬಾವಿ ಕೊರೆಸಲಾಗಿರುತ್ತದೆಂದು ಹಾಗೂ ಸಾಮ್ಯನಾಯ್ಕ ಬಿನ್ ಪೀರ್ಯಾನಾಯ್ಕರವರು 2011–12ನೇ ಸಾಲಿನಲ್ಲಿ ಗಂಗಾಕಲ್ಯಾಣ ಯೋಜನೆಯಡಿ, ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಆಯ್ಕೆಪಟ್ಟಿಯ ಕ್ರಮ ಸಂಖ್ಯೆ.24ರಲ್ಲಿ ಆಯ್ಕೆಯಾಗಿರುತ್ತಾರೆಂದು, ಅದರಂತೆ, ದಿನಾಂಕ 12/05/2013ರಲ್ಲಿ ಸರ್ವೇ ನಂ.73/1ರಲ್ಲಿನ 1 ಎಕರೆ 3 ಗುಂಟೆಯಲ್ಲಿ ಕೊಳವೆಬಾವಿ ಕೊರೆಸಿರುವುದಾಗಿ ಹೇಳಿರುತ್ತಾರೆ.

ಮುಂದುವರೆದು ವಿವರಿಸುವುದೇನೆಂದರೆ, ಕೊಳವೆಬಾವಿ ಕೊರೆದ ನಂತರ, ವಿದ್ಯುತ್ ಸಂಪರ್ಕಕ್ಕಾಗಿ ಮೆಸ್ಕಾಂಗೆ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ, ಸಾಮ್ಯನಾಯ್ಕ್ ಬಿನ್ ಪೀರ್ಯಾನಾಯ್ಕರವರ ಸರ್ವೇ ನಂ.73/1ರ ಬದಲಾಗಿ, 1 ಎಕರೆ 03 ಗುಂಟೆ ಪಹಣಿಗೆ ಬದಲಾಗಿ,

ಶ್ರೀ ಶಂಕರನಾಯ್ಕರವರ ತಂದೆಯಾದ ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕರವರ ಸರ್ವೇ ನಂ.71ರ 1 ಎಕರೆ 39 ಗುಂಟೆ ಪಹಣಿಯನ್ನು ನೀಡಿ, ವಿದ್ಯುತ್ ನಿಗಮಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಶಿಫಾರಸ್ಸು ಮಾಡಲಾಗಿತ್ತೆಂದು, ಅದರಂತೆ ವಿದ್ಯುತ್ ಸಂಪರ್ಕಕ್ಕೆ ಎಸ್ಟಿಮೇಟ್ ಮಾಡಿದ ನಂತರ, ಶಂಕರನಾಯ್ಕರವರಿಗೆ ವಿಷಯ ತಿಳಿದು, ತನ್ನ ಬಳಿ ದೂರು ನೀಡಿದಾಗ ಕಡತವನ್ನು ಪರಿಶೀಲಿಸಲಾಗಿ, ಕಣ್‌ತಪ್ಪಿನಿಂದ (by over site) ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕರವರ ಭೂಮಿಯಲ್ಲಿ ಕೊಳವೆಬಾವಿ ಕೊರೆದಿರುವುದಾಗಿ ದೃಢೀಕರಿಸಿರುವುದು ತಿಳಿದು ಬಂದ ನಂತರ, ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕರವರ ಸರ್ವೇ ನಂ.71ರ 1 ಎಕರೆ 39 ಗುಂಟೆ ಭೂಮಿಯಲ್ಲಿ ಯಾವುದೇ ಕೊಳವೆಬಾವಿ ಕೊರೆದಿರುವುದಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ ವಿದ್ಯುತ್ ಸಂಪರ್ಕದ ಎಸ್ಟಿಮೇಟ್‌ಅನ್ನು ರದ್ದುಪಡಿಸಲು ದಿನಾಂಕ 10/11/2014ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಬರೆಯಲಾಗಿರುತ್ತದೆಂದು ಹೇಳಿರುತ್ತಾರೆ. ತದನಂತರ, ದಿನಾಂಕ 12/11/2014ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ಗುತ್ತಿಗೆದಾರರಾದ ಶ್ರೀ ನಾಗರಾಜ, ಮೆ: ಮಾರುತಿ ಎಲೆಕ್ಟ್ರಿಕಲ್ಸ್ ರವರಿಗೆ ಪತ್ರ ಬರೆದು ಸದರಿ ಕಾಮಗಾರಿಗೆ ಪಡೆದ ಸಾಮಗ್ರಿಗಳನ್ನು ವಾಪಸ್ಸು ಸಲ್ಲಿಸಲು ತಿಳಿಸಿ, ಕೆಲಸ ನಿಲ್ಲಿಸಲು ಆದೇಶ ಪತ್ರ ಬರೆದಿರುತ್ತಾರೆಂದು ಹೇಳಿರುತ್ತಾರೆ. ಸಾಮ್ಯನಾಯ್ಕ ಬಿನ್ ಪೀರ್ಯಾನಾಯ್ಕರವರಿಗೆ ಕೊರೆದಿರುವ ಕೊಳವೆಬಾವಿಗೆ ವಿದ್ಯುತ್ ನಿಗಮದಿಂದ ಕೆ.ಬಿ.ಹೆಚ್.ಐ.ಪಿ/16795, ದಿನಾಂಕ 27/10/2016ರಂದು ವಿದ್ಯುತ್ ಸಂಪರ್ಕ ನೀಡಿರುವುದಾಗಿ ಹೇಳಿರುತ್ತಾರೆ.

ಮುಂದುವರೆದು, ಈ 2ನೇ ಆಸನೌರವರು ವಿವರಿಸುವುದೇನೆಂದರೆ, ನಿಗಮದಿಂದ ಯಾವುದೇ ಫಲಾನುಭವಿ ಕೊಳವೆ ಬಾವಿ ಸೌಲಭ್ಯ ಪಡೆಯಬೇಕಾದಲ್ಲಿ, ಆಯಾ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಆಯ್ಕೆಯಾಗಬೇಕಾಗಿರುತ್ತದೆಂದು ಹಾಗೂ ಆಯ್ಕೆಯಾದ ನಂತರ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಾಗುತ್ತದೆಂದು ಹೇಳಿರುತ್ತಾರೆ. ತದನಂತರ, ವಿಷಯ ನಿರ್ವಾಹಕರು ಪರಿಶೀಲಿಸಿ ಕೊಳವೆಬಾವಿ ಕೊರೆಯಲು ಗುತ್ತಿಗೆದಾರರಿಗೆ ಆದೇಶ ನೀಡಿರುವುದಾಗಿ ಹೇಳಿರುತ್ತಾರೆ ಹಾಗೂ ಕೊಳವೆಬಾವಿ ಕೊರೆಯುವಾಗ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಕೆಲಸದ ಮೇಲುಸ್ತುವಾರಿ ನಡೆಸುತ್ತಾರೆಂದು ಹೇಳಿರುತ್ತಾರೆ.

ಮುಂದುವರೆದು, ಕೊಳವೆಬಾವಿ ಬಿಲ್‌ಅನ್ನು ಜಿಲ್ಲಾ ಕಛೇರಿಗೆ ಒದಗಿಸಿದ ನಂತರ ಪುನ: ವಿಷಯ ನಿರ್ವಾಹಕರು ಪರಿಶೀಲಿಸಿ ಕಛೇರಿಯ ಅಧೀಕ್ಷಕರಿಗೆ ಮಂಡಿಸುತ್ತಾರೆಂದು ಸದರಿಯವರು ಮತ್ತೊಮ್ಮೆ ಪರಿಶೀಲಿಸಿ ಜಿಲ್ಲಾ ವ್ಯವಸ್ಥಾಪಕರಿಗೆ ಸಲ್ಲಿಸುವುದಾಗಿ ಹೇಳಿರುತ್ತಾರೆ. ತದನಂತರ, ಕೇಂದ್ರ ಕಛೇರಿಗೆ ಬಿಲ್ಲು ಪಾವತಿಗಾಗಿ ಕಳುಹಿಸಲಾಗುತ್ತದೆಂದು, ಕೇಂದ್ರ ಕಛೇರಿಯಲ್ಲಿ ವಿಧಾನಸಭಾ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿ ಪರಿಶೀಲಿಸಿದ ನಂತರ ಬಿಲ್ಲು ಮಂಜೂರು ಮಾಡಲಾಗುತ್ತದೆಂದು ಹೇಳಿರುತ್ತಾರೆ. ಆದರೆ, ಪ್ರಸ್ತುತ ಈ ಪ್ರಕರಣದಲ್ಲಿ ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕರವರು ಕಛೇರಿಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲವೆಂದು ಹಾಗೂ ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಈ ಪ್ರಕರಣದಲ್ಲಿ, ವಿದ್ಯುತ್ ನಿಗಮಕ್ಕೆ ಅರ್ಜಿ ಸಲ್ಲಿಸುವಾಗ ಚಂದ್ರನಾಯ್ಕರವರು ಕಣ್‌ತಪ್ಪಿನಿಂದ ಅವರ ದೊಡ್ಡಪ್ಪರವರ ಪಹಣಿ ಪತ್ರಿಕೆ ನೀಡಿರುತ್ತಾರೆಂದು ಹೇಳಿರುತ್ತಾರೆ. ಕಾರಣ, **ತಪ್ಪಾಗಿ ವಿದ್ಯುತ್ ಮಂಜೂರಾತಿಗೆ ದೃಢೀಕರಣ ಸಲ್ಲಿಸಿದ್ದು, ಆ ತಪ್ಪು ಗೊತ್ತಾದ ಕೂಡಲೇ ವಿದ್ಯುತ್ ಮಂಜೂರಾತಿಯನ್ನು ರದ್ದುಪಡಿಸಲಾಗಿರುತ್ತದೆಂದು ಹೇಳಿರುತ್ತಾರೆ. ಅಲ್ಲದೇ, ಇದು ಕೇವಲ ಕೆಲಸದ ಒತ್ತಡದಿಂದಾಗಿರುವ ಪ್ರಮಾದವಾಗಿರುತ್ತದೆಂದು ಹೇಳಿರುತ್ತಾರೆ.**

ಮುಂದುವರೆದು, ಆ.ಸ.ನೌ–2ರವರು ವಿವರಿಸುವುದೇನೆಂದರೆ, ಪ್ರತಿ ತಾಲ್ಲೂಕಿಗೆ ಒಬ್ಬ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಕೆಲಸ ನಿರ್ವಹಿಸಬೇಕಾಗಿರುತ್ತದೆಂದು, ಆದರೆ, ತಾನು ಹೆಚ್ಚುವರಿಯಾಗಿ ಕಡೂರು ತಾಲ್ಲೂಕಿನ ಜೊತೆಗೆ ಚಿಕ್ಕಮಗಳೂರು ಮತ್ತು ಮೂಡಿಗೆರೆ ತಾಲ್ಲೂಕುಗಳ ಕೆಲಸವನ್ನೂ ಸಹ ನಿರ್ವಹಿಸಬೇಕಾಗಿತ್ತೆಂದು ಹೇಳಿರುತ್ತಾರೆ. ಚಂದ್ರನಾಯ್ಕ ಬಿನ್ ಸಾಮ್ಯನಾಯ್ಕ ಬೋಳನಹಳ್ಳಿರವರಿಗೆ ಸರ್ವೆ ಸಂ.167/3ರ 1 ಎಕರೆಯಲ್ಲಿ ಕೊಳವೆಬಾವಿ ಕೊರೆಸಿರುವುದಾಗಿ ಹೇಳಿರುತ್ತಾರೆ. ಇವರು ಸಾಮ್ಯನಾಯ್ಕ ಬಿನ್ ಪೀರ್ಯಾನಾಯ್ಕರವರಿಂದ ಪ್ರತ್ಯೇಕವಾಗಿ ವಾಸವಾಗಿದ್ದು, ಬೇರೆ ಮನೆ ಹೊಂದಿರುತ್ತಾರೆಂದು ಹೇಳಿರುತ್ತಾರೆ. ನಿಯಮದ ಪ್ರಕಾರವೇ ಕೊಳವೆಬಾವಿ ಚಂದ್ರನಾಯ್ಕರವರ ಹೆಸರಿನಲ್ಲಿ ಕೊರೆಯಲಾಗಿರುತ್ತದೆಂದು ಹೇಳಿರುತ್ತಾರೆ. ದೂರುದಾರರ ತಂದೆಯಾದ ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕರವರು ಮತ್ತು ಚಂದ್ರನಾಯ್ಕರವರ ತಂದೆ ಸಾಮ್ಯನಾಯ್ಕ ಬಿನ್ ಪೀರ್ಯಾನಾಯ್ಕ ಇಬ್ಬರು ಒಂದೇ ತಂದೆಯ ಮಕ್ಕಳಿರುವುದಾಗಿ ಹೇಳಿರುತ್ತಾರೆ.

ಸೋಮ್ಲಾನಾಯ್ಕ ಬಿನ್ ಪೀರ್‍ಯಾನಾಯ್ಕರವರಿಗೆ ಒಬ್ಬನೇ ಮಗನಾದ ಶ್ರೀ ಶಂಕರಾನಾಯ್ಕ ಇರುವುದಾಗಿ ಹೇಳಿರುತ್ತಾರೆ.

ಮುಂದುವರೆದು, 2ನೇ ಆ.ಸ.ನೌ.ರವರು ವಿವರಿಸುವುದೇನೆಂದರೆ, ಸಾಮ್ಯನಾಯ್ಕ ಬಿನ್ ಪೀರ್‍ಯಾನಾಯ್ಕರವರಿಗೆ ಮೂರು ಜನ ಮಕ್ಕಳಿದ್ದು, ಅವರುಗಳು;

1) ಸೋಮ್ಲಾನಾಯ್ಕ ಬಿನ್ ಸಾಮ್ಯನಾಯ್ಕ. ಹಿರಿಯ ಮಗನಿರುವುದಾಗಿ

2) ಚಂದ್ರಾನಾಯ್ಕ ಬಿನ್ ಸಾಮ್ಯನಾಯ್ಕ. 2ನೇ ಮಗನಿರುವುದಾಗಿ

3) ಮೋಹನ್‌ನಾಯ್ಕ ಬಿನ್ ಸಾಮ್ಯನಾಯ್ಕ 3ನೇ ಮಗನಿರುವುದಾಗಿ ಹೇಳಿರುತ್ತಾರೆ.

ಸೋಮ್ಲಾನಾಯ್ಕ ಮತ್ತು ಸಾಮ್ಯನಾಯ್ಕರವರುಗಳು ಸ್ವಂತ ಅಣ್ಣತಮ್ಮಂದಿರಾಗಿರುತ್ತಾರೆ ಎಂದು ಹೇಳಿರುತ್ತಾರೆ.

ಶಂಕರನಾಯ್ಕ ಸರ್ಕಾರಿ ನೌಕರರಾಗಿದ್ದು, ಇವರು ಹಾಸನ ಜಿಲ್ಲೆಯಲ್ಲಿ ವಾಸವಾಗಿದ್ದಾರೆಂದು, ಸೋಮ್ಲಾನಾಯ್ಕ ಬಿನ್ ಪೀರ್‍ಯಾನಾಯ್ಕರವರಿಗೆ ಶಂಕರನಾಯ್ಕ ಮಾತ್ರ ಇದ್ದು, ಸೋಮ್ಲಾನಾಯ್ಕರವರು ಶಂಕರನಾಯ್ಕರವರೊಂದಿಗೆ ವಾಸವಾಗಿರುವುದರಿಂದ ಹಾಗೂ ಇವರ ಎಲ್ಲಾ ಆಸ್ತಿ ಶಂಕರನಾಯ್ಕರವರಿಗೆ ಬರುವುದರಿಂದ, ಯಾವುದೇ ಸರ್ಕಾರಿ ಸವಲತ್ತು ನೀಡಲು ಬರುವುದಿಲ್ಲವೆಂದು ಹೇಳಿರುತ್ತಾರೆ. ವಿದ್ಯುತ್ ನಿಗಮದಿಂದ ಮಾಹಿತಿಹಕ್ಕಿನಡಿ ವಿದ್ಯುತ್ ಮಂಜೂರಾದ ಬಗ್ಗೆ ದಾಖಲಾತಿ ಪಡೆದು ತನಗೆ ದೂರು ನೀಡಿದಾಗ ಪರಿಶೀಲಿಸಿ, ಸೋಮ್ಲಾನಾಯ್ಕರವರಿಗೆ ಕೊಳವೆಬಾವಿ ಕೊರೆದಿರುವುದಿಲ್ಲವೆಂದು ತಿಳಿಸಿದ ನಂತರ, ಶಂಕರನಾಯ್ಕರವರು ಜಿಲ್ಲಾ ಕಛೇರಿಗೆ ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿ, ಯಾರ ಹೆಸರಿನಲ್ಲಿ ಕೊಳವೆಬಾವಿ ಮಂಜೂರಾಗಿದೆ ಎಂದು ಸಂಪೂರ್ಣ ದಾಖಲಾತಿ ಪಡೆದಿರುತ್ತಾರೆಂದು ಹೇಳಿರುತ್ತಾರೆ. ಈ ಬಗ್ಗೆ ನಿಗಮದ ಕೇಂದ್ರ ಕಛೇರಿಗೂ ಮಾಹಿತಿ ಹಕ್ಕಿನಡಿಯಲ್ಲಿ ಅರ್ಜಿ ಸಲ್ಲಿಸಿದಾಗ, ಅವರು ದೂರುದಾರರಿಗೆ ಜಿಲ್ಲಾ ಕಛೇರಿಯಿಂದ ಮಾಹಿತಿ ಪಡೆಯಬೇಕೆಂದು ತಿಳಿಸಿರುವುದಾಗಿ ಹೇಳಿರುತ್ತಾರೆ. ಅದರಂತೆ, ಜಿಲ್ಲಾ ಕಛೇರಿಯಿಂದ ಎಲ್ಲಾ ದಾಖಲಾತಿಗಳನ್ನು ನೀಡಿರುವುದಾಗಿ, ಅದರಲ್ಲಿ ಸೋಮ್ಲಾನಾಯ್ಕಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ಇರುವುದಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ, ಶಂಕರನಾಯ್ಕರವರು ಚಂದ್ರನಾಯ್ಕ ಮತ್ತು ಮೋಹನ್‌ರವರ ಮಾವನವರಾದ ಮತ್ತೊಬ್ಬ ಚಂದ್ರನಾಯ್ಕರವರನ್ನು ತನ್ನ ಬಳಿ ಕರೆತಂದು

ರಾಜಿಸಂಧಾನ ಮಾಡಿಕೊಳ್ಳೋಣ ಎಂದು ತಿಳಿಸಿರುವುದಾಗಿ, ತಾನು ಡೀಸಲ್‌ಗೆ ರೂ.20,000/–ಗಳನ್ನು ನೀಡುವುದಾಗಿ, ಹಾಗೂ ಈ ಆ.ಸ.ನೌರವರು ಉಳಿದ ರೂ.40,000/– ಹಣ ಕೊಟ್ಟು ತನಗೆ ಕೊಳವೆಬಾವಿ ಕೊರೆಸಿಕೊಡುವಂತೆ ಬೇಡಿಕೆ ಇಟ್ಟದ್ದಾಗಿ, ತಾನು ಒಪ್ಪದಿದ್ದ ಕಾರಣಕ್ಕೆ ತನ್ನ ವಿರುದ್ಧ ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವುದಾಗಿ ಹೇಳಿರುತ್ತಾರೆ. ದೂರಿನಲ್ಲಿ, ಸೋಮ್ಲಾನಾಯ್ಕರವರಿಗೆ ಕೊರೆಸಬೇಕಾದ ಕೊಳವೆಬಾವಿಯನ್ನು ಸಾಮ್ಯನಾಯ್ಕರವರಿಗೆ ಕೊರೆಸಿರುವುದಾಗಿ ಹೇಳಿ ಈ ಸುಳ್ಳು ದೂರು ನೀಡಿರುವುದಾಗಿ ಹೇಳಿರುತ್ತಾರೆ. ವಿದ್ಯುತ್ ಇಲಾಖೆಯಿಂದ ಮಂಜೂರಾತಿಯನ್ನು ರದ್ದುಪಡಿಸಿದ ನಂತರ, 2ನೇ ಬಾರಿಗೆ ಚಂದ್ರನಾಯ್ಕರಿಂದ ಕೊಳವೆಬಾಪಿಗೆ ಪಡೆದ ವೆಚ್ಚ, ಪಂಪ್, ಮೋಟಾರ್ ವೆಚ್ಚ ವಸೂಲಿ ಮಾಡುವಂತೆ ದೂರು ನೀಡಿರುತ್ತಾರೆಂದು, ಆದರೆ, ಚಂದ್ರನಾಯ್ಕರವರಿಗೂ ಕೊಳವೆಬಾವಿ ಕೊರೆದಿರುವುದು ತಿಳಿದ ನಂತರ, 3ನೇ ಬಾರಿಗೆ ಚಂದ್ರನಾಯ್ಕ ಬಾಬ್ತು ಸರ್ವೇ ನಂ.71/7ರಲ್ಲಿ ಕೊಳವೆಬಾವಿ ಕೊರೆದಿರುವುದಾಗಿ ಸುಳ್ಳು ದೂರು ನೀಡಿರುತ್ತಾರೆಂದು ಹೇಳಿರುತ್ತಾರೆ. ಅಲ್ಲದೇ, ಚಂದ್ರನಾಯ್ಕರಿಗೆ ಸರ್ವೇ ನಂ.167/3ರ 1 ಎಕರೆ ಭೂಮಿಯಲ್ಲಿ ಕೊಳವೆಬಾವಿಯನ್ನು ಸರ್ಕಾರದ ನಿಯಮಗಳಂತೆ ಕೊರೆಯಲಾಗಿರುತ್ತದೆಂದು ಹೇಳಿರುತ್ತಾರೆ.

ಮುಂದುವರೆದು, 2ನೇ ಆ.ಸ.ನೌ.ರವರು ವಿವರಿಸುವುದೇನೆಂದರೆ, **"ತಾನು ಕಣ್‌ತಪ್ಪಿನಿಂದ ವಿದ್ಯುತ್ ಇಲಾಖೆಗೆ ವಿದ್ಯುತ್ ಮಂಜೂರು ಮಾಡಲು ಪತ್ರ ಬರೆಯುವಾಗ ಸೋಮ್ಲಾನಾಯ್ಕರವರ ಪಹಣಿ ಪತ್ರಿಕೆ ದೃಢೀಕರಿಸಿ ಪತ್ರ ಬರೆದಿರುವುದು ನಿಜವೆಂದು ಒಪ್ಪಿಕೊಂಡಿರುತ್ತಾರೆ. ತದನಂತರ, ವಿದ್ಯುತ್ ಮಂಜೂರಾತಿಯನ್ನು ರದ್ದುಪಡಿಸಿರುವುದಾಗಿ ಹೇಳಿರುತ್ತಾರೆ"**. ಶಂಕರನಾಯ್ಕರವರು ದೂರು ನೀಡಿದ ಕೂಡಲೇ ವಿದ್ಯುತ್ ಮಂಜೂರಾತಿ ರದ್ದುಪಡಿಸಿರುವುದಾಗಿ ಹೇಳಿರುತ್ತಾರೆ. ಈ ಎಲ್ಲಾ ಕಾರಣದಿಂದ ಈ ಆರೋಪದಿಂದ ಮುಕ್ತಿಗೊಳಿಸುವಂತೆ ವಿನಂತಿಸಿರುತ್ತಾರೆ.

10) ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು, ದೂರುದಾರರಾದ ಶ್ರೀ ಶಂಕರನಾಯ್ಕರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ–1 ರಿಂದ ನಿ.ಪಿ–05ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಶ್ರೀ ಚನ್ನಯ್ಯರವರನ್ನು

ಪಿ.ಡಬ್ಲ್ಯು.2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ–6 ದಾಖಲೆಯನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

11) ವಿಚಾರಣಾ ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡ ನಂತರ, ಆ.ಸ.ನೌ–2ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುತ್ತದೆ. ಆ.ಸ.ನೌ–1ರವರು ಗೈರು ಹಾಜರಾಗಿರುವುದರಿಂದ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಗೆ ವಿನಾಯತಿ ನೀಡಲಾಗಿರುತ್ತದೆ ಮತ್ತು ದಿನಾಂಕ 29/07/2019ರಂದು ಏಕತರ್ಫಿ ಎಂದು ನಿರ್ಧರಿಸಲಾಗಿರುತ್ತದೆ.

12) ಆ.ಸ.ನೌ–2ರವರು ತಮ್ಮ ಪರವಾಗಿ ತಾನು ಡಿ.ಡಬ್ಲ್ಯು.1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ–1 ಮತ್ತು ನಿಡಿ–10 ಎಂದು ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

13) ಉಭಯ ಪಕ್ಷಗಾರರ ಪರವಾಗಿ ವಾದವಿವಾದವನ್ನು ಆಲಿಸಲಾಯಿತು ಮತ್ತು ಆ.ಸ.ನೌರವರ ಪರ ರಕ್ಷಣಾ ಸಹಾಯಕರು ಸಲ್ಲಿಸಿದ ಲಿಖಿತ ವಾದಾಂಶವನ್ನು ಪರಿಶೀಲಿಸಲಾಯಿತು.

14) **ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.**

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2**: ಆದೇಶವೇನು?

15) ವಾದವಿವಾದ ಆಲಿಸಿದ ನಂತರ ಕಡವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ಸಕಾರಾತ್ಮಕವಾಗಿ.

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

16) **ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀ ಶಂಕರನಾಯ್ಕರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ರಿಂದ ನಿ.ಪಿ–05ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ–1 ದಾಖಲೆಯು ದೂರು. ನಿಪಿ–2 ಮತ್ತು ನಿಪಿ–3 ಪ್ರಪತ್ರ–1 ಮತ್ತು ಪ್ರಪತ್ರ–2 ದಾಖಲೆಯು ಇರುತ್ತದೆ. ನಿಪಿ–4 ದಾಖಲೆಯು, ದೂರಿನೊಂದಿಗೆ ಸಲ್ಲಿಸಲಾದ ದಾಖಲೆಗಳ ಜೆರಾಕ್ಸ್ ಪ್ರತಿ ಇರುತ್ತದೆ. ನಿಪಿ–5 ದಾಖಲೆಯು ದೂರುದಾರರು ದೂರಿನ ವಿಚಾರಣೆ ಕಾಲಕ್ಕೆ ಸಲ್ಲಿಸಿದ ಪ್ರತ್ಯುತ್ತರ ಇರುತ್ತದೆ.

17) ದೂರುದಾರರ ಆಪಾದನೆ ಮತ್ತು ಆ.ಸ.ನೌರವರುಗಳ ವಿರುದ್ಧ ರಚಿಸಲಾದ ದೋಷಾರೋಪಣೆ ಏನೆಂದರೆ, 1ನೇ ಆ.ಸ.ನೌರವರು ಚಿಕ್ಕಮಗಳೂರಿನಲ್ಲಿರುವ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಮತ್ತು 2ನೇ ಆ.ಸ.ನೌ.ರವರು ಚಿಕ್ಕಮಗಳೂರಿನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ವತಿಯಿಂದ ಕೊಡಲಾಗುವ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬೋಳನಹಳ್ಳಿ, ತಾಂಡ್ಯ ಎಂಬಲ್ಲಿಗೆ ಸೇರಿದ ಪೀರ್ಯಾನಾಯ್ಕರವರ ಮಗನಾದ ಸೋಮ್ಲಾನಾಯ್ಕರವರ

ಬಾಬ್ತು ಸರ್ವೇ ನಂ.71ರಲ್ಲಿಯ ಜಮೀನಿನಲ್ಲಿ ಕೊಳವೆಬಾವಿಯನ್ನು ನಿರ್ಮಿಸುವ ಬಗ್ಗೆ ಈ ಆ.ಸ.ನೌ.ರವರುಗಳು ನಡಾವಳಿ ನಡೆಸಿದ್ದು, ಸದರಿ ಪೀರ್ಯಾನಾಯ್ಕರವರ ಮಗನಾದ ಸೋಮ್ಲಾನಾಯ್ಕರವರ ಬಾಬ್ತು ಸರ್ವೇ ನಂ.71ರಲ್ಲಿಯ ಜಮೀನಿನಲ್ಲಿ ಕೊಳವೆಬಾವಿ ಕೊರೆಸುವ ಬದಲಾಗಿ ಅದೇ ಊರಿನ ಮತ್ತೊಬ್ಬ ವ್ಯಕ್ತಿಯಾದ ಚಂದ್ರನಾಯ್ಕರವರ ಬಾಬ್ತು ಸರ್ವೇ ನಂ.71/7ರಲ್ಲಿಯ ಜಮೀನಿನಲ್ಲಿ ಕೊಳವೆಬಾವಿಯನ್ನು ಕೊರೆಸಿರುವುದಾಗಿ ಹೇಳಲಾಗಿರುತ್ತದೆ. ಅಲ್ಲದೇ, 2ನೇ ಆ.ಸ.ನೌ.ರವರು ಈ ಬಗ್ಗೆ ದೃಢೀಕರಣ ಪತ್ರವನ್ನು ಒದಗಿಸಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ ಎಸಗಿರುವುದಾಗಿ ಆಪಾದಿಸಲಾಗಿರುತ್ತದೆ.

18) ಮುಂದುವರೆದ ಆರೋಪವೇನೆಂದರೆ, ಚಂದ್ರನಾಯ್ಕ ಎಂಬುವವರು ದೂರುದಾರರ ತಂದೆಯಾದ ಶ್ರೀ ಸೋಮ್ಲಾನಾಯ್ಕರವರು ದೇವನೂರು ಗ್ರಾಮದ ಸರ್ವೇ ನಂ.71ರಲ್ಲಿ ಹೊಂದಿರುವ 1 ಎಕರೆ 30 ಗುಂಟೆ ಜಮೀನಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ನಕಲಿ ಮಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸರ್ಕಾರದವರು ನೀಡುವ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಚಂದ್ರನಾಯ್ಕರವರು ಹೊಂದಿರುವ ಜಮೀನಿನಲ್ಲಿ ಕೊಳವೆಬಾವಿ ಕೊರೆಸಿಕೊಂಡು, ಅದಕ್ಕೆ ಸಂಬಂಧಪಟ್ಟ ಸಬ್‌ಮರ್ಸಿಬಲ್ ಪಂಪ್, ಮೋಟಾರ್, ಪೈಪು ಮತ್ತು ಕೇಬಲ್‌ಗಳನ್ನು ಪಡೆದುಕೊಂಡಿದ್ದು, ಸರ್ವೇ ನಂ.71ರ ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ 2ನೇ ಆ.ಸ.ನೌ.ರವರು ಮೆಸ್ಕಾಂ ಸಂಸ್ಥೆಗೆ ಶಿಫಾರಸ್ಸು ಮಾಡಿರುವುದು ತಪ್ಪೆಂದು ತಿಳಿಸಿ ದೂರು ನೀಡಿದರೂ ಸಹ, 2ನೇ ಆ.ಸ.ನೌ.ರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ. ಈ ಬಗ್ಗೆ ಇವರು ಸರ್ವೇ ನಂ.71ರಲ್ಲಿ ಕೊಳವೆಬಾವಿಯನ್ನು ಕೊರೆದಿರುವುದಾಗಿ ದೃಢೀಕರಣ ಪತ್ರ ನೀಡಿರುವುದು ಈ 2ನೇ ಆ.ಸ.ನೌ.ರವರ ಕರ್ತವ್ಯಲೋಪ ಮತ್ತು ದುರ್ನಡತೆ ಮೇಲ್ನೋಟದಲ್ಲೇ ಕಂಡುಬರುವುದಾಗಿ ಆಪಾದಿಸಲಾಗಿರುತ್ತದೆ.

19) ಆ.ಸ.ನೌ.ರವರುಗಳ ಮೇಲೆ ರಚಿಸಲಾದ ಆರೋಪವನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರವು ದೂರುದಾರರಾದ ಶ್ರೀ ಶಂಕರನಾಯ್ಕರವರನ್ನು ಪಿ.ಡಬ್ಲ್ಯು–1 ಎಂದು ಸಾಕ್ಷಿ ನುಡಿಸಿಕೊಂಡಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, **"ನನ್ನ ತಂದೆಯ ಹೆಸರಿಗೆ ಜಮೀನು**

ಸರ್ವೇ ನಂ.71ರ ಕ್ಷೇತ್ರ 1 ಎಕರೆ 39 ಗುಂಟೆಯು, ಕಡೂರು ತಾಲ್ಲೂಕಿನ, ಸಖರಾಯ ಪಟ್ಟಣ ಹೋಬಳಿ, ದೇವನೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಬೋಳನಹಳ್ಳಿಯಲ್ಲಿರುತ್ತದೆ. ಸದರಿ ಮೇಲೆ ಹೇಳಿದ ಶ್ರೀ ಚಂದ್ರನಾಯ್ಕ ಎಂಬುವರು ನನಗೆ ಸಂಬಂಧಿಕರಿರುತ್ತಾರೆ. ಸದರಿ ಶ್ರೀ ಚಂದ್ರನಾಯ್ಕ ಎಂಬುವರು ನಾನು ಮೇಲೆ ಹೇಳಿದ ಜಮೀನಿನ ಪಹಣಿಯನ್ನು ಪಡೆದುಕೊಂಡು, ಸದರಿ ಜಮೀನಿನ ಅಡಿಯಲ್ಲಿ ಸರ್ಕಾರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಿಗುವಂತಹ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ".

"ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜಮೀನುಗಳಿಗೆ ಬೋರ್‌ವೆಲ್ ತೋಡುವ ವ್ಯವಸ್ಥೆ ಅಡಿಯಲ್ಲಿ ನಮ್ಮ ಜಮೀನಿನ ಪಹಣಿ ಪತ್ರಿಕೆ ತೋರಿಸಿ, ಅವರ ಜಮೀನು ಇರುವ ಸರ್ವೇ ನಂ.73ರ ಕ್ಷೇತ್ರ 1 ಎಕರೆ 10 ಗುಂಟೆ ಜಮೀನಿನಲ್ಲಿ ಶ್ರೀ ಚಂದ್ರನಾಯ್ಕ ತೋಡಿಸಿಕೊಂಡಿರುತ್ತಾರೆ. ಸದರಿ ಬೋರ್‌ವೆಲ್‌ಗೆ ಸರ್ಕಾರದ ವತಿಯಿಂದ ನೀಡುವ ಸೌಲಭ್ಯಗಳಾದ ಸಬ್‌ಮರ್ಸಿಬಲ್ ಪಂಪ್, ಮೋಟಾರ್ ಪೈಪು, ಕೇಬಲ್ ಇತ್ಯಾದಿ ಸಾಮಗ್ರಿಗಳನ್ನು ಅವರು ಪಡೆದುಕೊಂಡಿರುತ್ತಾರೆ. ಅಲ್ಲದೆ, ಸದರಿ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಪಡೆಯಲು 5 ಕಂಬಗಳ ಅಂದಾಜು ಪಟ್ಟಿ ಅನುಮೋದನೆಗೊಂಡಿತ್ತು. "

"ಆ.ಸ.ನೌ–1ರವರಾದ ಶ್ರೀ ಆರ್.ಶೇಖರಪ್ಪರವರು ಆಗ ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿಯಾಗಿದ್ದು, ಅವರು ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೆ ನನ್ನ ತಂದೆಯ ಹೆಸರಿನಲ್ಲಿದ್ದ ಜಮೀನಿನಲ್ಲಿ, ಕೊಳವೆ ಬಾವಿ ಕೊರೆಸಲು ಅನುಮತಿಸಿರುತ್ತಾರೆ."

"ಆ.ಸ.ನೌ–2ರವರಾದ ಶ್ರೀ ಹೆಚ್.ವಿ.ದಾಮೋದರರವರು, ನನ್ನ ತಂದೆಯ ಹೆಸರಾದ ಶ್ರೀ ಸೋಮ್ಲಾನಾಯ್ಕ ಬಿನ್ ಪಿರ‍್ಯಾನಾಯ್ಕರವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಲಾಗಿದೆ ಎಂದು ಮತ್ತು ಸದರಿ ಜಮೀನಿನಲ್ಲಿ ಕೊರೆದಿರುವ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಮೆಸ್ಕಾಂಗೆ ಶಿಫಾರಸ್ಸು ಮಾಡಿರುತ್ತಾರೆ."

20) ಈ ಮೇಲ್ಕಂಡಂತೆ ದೂರುದಾರರು ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದನ್ನು ಪರಿಶೀಲಿಸಿದಾಗ, ಈ ದೂರುದಾರರ ತಂದೆಯ ಹೆಸರಿನಲ್ಲಿರುವ ಸರ್ವೇ ನಂ.71ರ ಕ್ಷೇತ್ರ 1 ಎಕರೆ 39 ಗುಂಟೆ ಜಮೀನಿನ ದಾಖಲೆಯನ್ನು ತನ್ನ ಸಂಬಂಧಿಕರಾದ ಚಂದ್ರನಾಯ್ಕ ಎಂಬುವವರು ನೀಡಿ, ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಬೋರ್‌ವೆಲ್ ತೋಡಿಸಿಕೊಂಡಿರುವುದು ಕಂಡು ಬಂದಿರುತ್ತದೆ. ಅಲ್ಲದೇ, ಸದರಿ ಬೋರ್‌ವೆಲ್‌ಗೆ ಸರ್ಕಾರದ ವತಿಯಿಂದ ನೀಡುವ ಸೌಲಭ್ಯಗಳಾದ ಸಬ್‌ಮರ್ಸಿಬಲ್ ಪಂಪ್, ಮೋಟಾರ್ ಪೈಪು ಮತ್ತು ಕೇಬಲ್ ಇತ್ಯಾದಿ ಸಾಮಗ್ರಿಗಳನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಅಲ್ಲದೇ, ಸದರಿ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ನೀಡಲು 5 ಕಂಬಗಳ ಅಂದಾಜು ಪಟ್ಟಿ ಸಹ ಅನುಮೋದನೆಗೊಂಡಿತ್ತೆಂದು ನುಡಿದಿರುತ್ತಾರೆ. ಅಲ್ಲದೇ, ಈ 2ನೇ ಆ.ಸ.ನೌ.ರವರು ದೂರುದಾರರ ತಂದೆಯ ಹೆಸರಾದ ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕರವರ ಜಮೀನಿನಲ್ಲಿ ಕೊಳವೆಬಾವಿ ಕೊರೆಸಲಾಗಿದೆ ಎಂದು ಮತ್ತು ಸದರಿ ಜಮೀನಿನಲ್ಲಿ ಇರುವ ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಮೆಸ್ಕಾಂಗೆ ಶಿಫಾರಸ್ಸನ್ನು ಸಹ ಮಾಡಿರುವುದು ಕಂಡು ಬಂದಿರುತ್ತದೆ. 1ನೇ ಆ.ಸ.ನೌ.ರವರು ಆಗಿನ ಜಿಲ್ಲಾ ವ್ಯವಸ್ಥಾಪಕರಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿಯಾಗಿದ್ದು, ಅವರು ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ, ತನ್ನ ತಂದೆಯ ಹೆಸರಿನಲ್ಲಿದ್ದ ಜಮೀನಿನಲ್ಲಿ ಕೊಳವೆಬಾವಿ ಕೊರೆಸಲು ಅನುಮತಿಸಿರುವುದು ಕಂಡು ಬರುತ್ತದೆ.

21) ದೂರುದಾರರು ಸಲ್ಲಿಸಿದ ದೂರನ್ನು ಮಂಡನಾಧಿಕಾರಿಗಳು ನಿಪಿ–1 ಎಂದು ಗುರುತಿಸಿಕೊಂಡಿರುತ್ತಾರೆ. ಪ್ರಪತ್ರ–1 ಮತ್ತು ಪ್ರಪತ್ರ–2 ನ್ನು ನಿಪಿ–2 ಮತ್ತು ನಿಪಿ–3 ಎಂದು ಗುರುತಿಸಿಕೊಂಡಿದ್ದು, ನಿಪಿ–4 ದಾಖಲೆಯು ದೂರುದಾರರು ಮಾಹಿತಿಹಕ್ಕಿನಡಿಯಲ್ಲಿ ಪಡೆದ ದಾಖಲೆಯಾಗಿದ್ದು, ಇದರಲ್ಲಿ ತನ್ನ ತಂದೆಯ ಹೆಸರಿನಲ್ಲಿರುವ ಸರ್ವೇ ನಂ.71ರಲ್ಲಿ ಗಂಗಾಕಲ್ಯಾಣ ಕೊಳವೆಬಾವಿಗೆ ವಿದ್ಯುತ್ ಸಂಪರ್ಕಕ್ಕಾಗಿ ಆಗಿರುವ ಎಸ್ಟಿಮೇಟ್ ಪ್ರತಿ ನೀಡುವಂತೆ ಕೋರಿಕೊಂಡಿದ್ದು, ಅದರಂತೆ ಅವರು ದಾಖಲೆಗಳನ್ನು ಪೂರೈಸಿದ್ದು, ಅವುಗಳಲ್ಲಿ ಸರ್ವೇ ನಂ.71ರಲ್ಲಿ ಸ್ಥಾಪಿಸಿರುವ 5 ಹೆಚ್.ಪಿ. ಪಂಪ್‌ಸೆಟ್‌ಗೆ ಮಂಜೂರಾತಿ ಪತ್ರವನ್ನು ಸೋಮ್ಲಾನಾಯ್ಕ ಬಿನ್ ಪೀರ್ಯಾನಾಯ್ಕರವರ ಹೆಸರಿಗೆ ನೀಡಿರುವುದು ಕಂಡು ಬಂದಿರುತ್ತದೆ. ಅಲ್ಲದೇ, ನಿಪಿ–5 ರೊಂದಿಗೆ ಸಲ್ಲಿಸಿರುವ 17ನೇ

ಹಾಳೆಯು ಈ 2ನೇ ಆ.ಸ.ನೌ.ರವರು ದೂರುದಾರರ ತಂದೆಯ ಹೆಸರಿನಲ್ಲಿ ಕೊಳವೆಬಾವಿ ಕೊರೆಸಲಾಗಿದೆ ಎಂದು ನೀಡಿರುವ ದೃಢೀಕರಣ ಪತ್ರವಿರುವುದು ಕಂಡು ಬಂದಿರುತ್ತದೆ. ದೂರುದಾರರು ಸದರಿ ದಾಖಲೆಯಲ್ಲಿರುವ ಹೆಬ್ಬೆಟ್ಟಿನ ರುಜು ತನ್ನ ತಂದೆಯಾದ ಸೋಮ್ಲಾನಾಯ್ಕ ಬಿನ್ ಪೀರ್‍ಯಾನಾಯ್ಕರವರ ರುಜು ಇರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿರುತ್ತಾರೆ. 2ನೇ ಆ.ಸ.ನೌ.ರವರು ಒಬ್ಬ ಜವಾಬ್ದಾರಿಯುತ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿದ್ದು, ಫಲಾನುಭವಿ ಆಯ್ಕೆ ಮಾಡುವಾಗ ಅನುಸರಿಸಬೇಕಾದ ನಿಯಮಾವಳಿಗಳನ್ನು ಅನುಸರಿಸದೇ ಕರ್ತವ್ಯಲೋಪವೆಸಗಿರುವುದು ಮೇಲ್ನೋಟದಲ್ಲೇ ಕಂಡುಬಂದಿರುತ್ತದೆ.

22) ಶಿಸ್ತು ಪ್ರಾಧಿಕಾರವು ಆಗಿನ ಚಿಕ್ಕಮಗಳೂರಿನ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮ್ಯಾನೇಜರ್ ಆದ ಶ್ರೀ ಚನ್ನಯ್ಯರವರನ್ನು ಪಿಡಬ್ಲ್ಯು-2 ಎಂದು ಸಾಕ್ಷಿ ನುಡಿಸಿಕೊಂಡಿದ್ದು, ಇವರು ಈ ಕೇಸಿನ ದೂರುದಾರರಾದ ಶ್ರೀ ಸೋಮ್ಲಾನಾಯ್ಕರವರು ಸರ್ವೇ ನಂ.71 ಕ್ಷೇತ್ರ 1 ಎಕರೆ 34 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲೆ ಕೇಳಿದ್ದು, ಆ ಬಗ್ಗೆ ತಾನು ನಿಪಿ-6 ವರದಿ ನೀಡಿರುವುದಾಗಿ ಹೇಳಿರುತ್ತಾರೆ. ನಿಪಿ-6 ದಾಖಲೆಯ ಪ್ರಕಾರ, ಸೋಮ್ಲಾನಾಯ್ಕ ಬಿನ್ ಪೀರ್‍ಯಾನಾಯ್ಕರವರ ಹೆಸರಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆಬಾವಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ಬಗ್ಗೆ ಮಾಹಿತಿಹಕ್ಕಿನಡಿಯಲ್ಲಿ ಕೇಳಿದ ಮಾಹಿತಿಗೆ ತಾನು ಮಾಹಿತಿ ನೀಡಿರುವುದಾಗಿ ಆ ಪ್ರಕಾರ, ಕಡೂರು ತಾಲ್ಲೂಕಿನ ನಿಗಮದ ಗಂಗಾಕಲ್ಯಾಣ ಯೋಜನೆಯ ಅನುಷ್ಠಾನಾಧಿಕಾರಿಗಳಾದ ಆ.ಸ.ನೌ-2 ಶ್ರೀ ಎಚ್.ಪಿ.ದಾಮೋದರ್‌ರವರಿಗೆ ವಿವರಣೆ ನೀಡುವಂತೆ ಮೆಮೋ ನೀಡಿರುವುದಾಗಿ, ಸದರಿಯವರು ಪೂರಕ ದಾಖಲೆಗಳೊಂದಿಗೆ ಹಾಗೂ ಸೋಮ್ಲಾನಾಯ್ಕ ಬಿನ್ ಪೀರ್‍ಯಾನಾಯ್ಕ ಬೋಳನಹಳ್ಳಿರವರ ಹೆಸರಿನಲ್ಲಿ ಕೊಳವೆಬಾವಿ ಆಯ್ಕೆ ಸಮಿತಿಯಲ್ಲಿ ಕೊಳವೆಬಾವಿ ಸೌಲಭ್ಯಕ್ಕೆ ಆಯ್ಕೆಯಾಗಿರುವುದಿಲ್ಲವೆಂದು ವರದಿ ನೀಡಿರುವುದಾಗಿ ಹೇಳಿರುತ್ತಾರೆ. ಮಂಡನಾಧಿಕಾರಿಗಳು ಗುರುತಿಸಿಕೊಂಡಿರುವ ನಿಪಿ-6 ದಾಖಲೆಯನ್ನು ಪರಿಶೀಲಿಸಿದಾಗ, ಆ.ಸ.ನೌ.ರವರು ನೀಡಿರುವ ಮಾಹಿತಿಯಂತೆ ದೂರುದಾರರ ತಂದೆಯ ಹೆಸರಿನಲ್ಲಿ ಸರ್ವೇ ನಂ.71 ವಿಸ್ತೀರ್ಣ 1.34 ಎಕರೆ ಜಮೀನಿನಲ್ಲಿ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗಿರುವುದಿಲ್ಲವೆಂಬುದು ರುಜುವಾತಾಗುತ್ತದೆಂದು ವಾದಿಸಿರುತ್ತಾರೆ.

23) ಈ ಪ್ರಕರಣದಲ್ಲಿ, 1ನೇ ಆ.ಸ.ನೌ.ರವರು ಯಾವುದೇ ರಕ್ಷಣಾತ್ಮಕ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆ.ಸ.ನೌ–1 ರವರು ಪಾರ್ಶ್ವವಾಯುವಿನಿಂದ ಅನಾರೋಗ್ಯಕ್ಕೊಳಗಾಗಿ ಬಳಲುತ್ತಿರುವುದು ಕಂಡು ಬಂದಿರುತ್ತದೆ. ಆ.ಸ.ನೌ–2ರವರು ಸಲ್ಲಿಸಿರುವ ರಕ್ಷಣಾ ಹೇಳಿಕೆಯಲ್ಲಿ, ಸರ್ವೇ ನಂ.71ರಲ್ಲಿ ಕೊಳವೆಬಾವಿ ತೆಗೆದಿರುವುದನ್ನು ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ತಾನು ಮತ್ತು ಆ.ಸ.ನೌ–1ರವರು ಸೇರಿ ದೂರುದಾರರ ತಂದೆಯ ಹೆಸರಿನಲ್ಲಿರುವ ಕಂದಾಯ ದಾಖಲೆಗಳನ್ನು ಉಪಯೋಗಿಸಿ ಊರಿನ ಮತ್ತೊಬ್ಬ ವ್ಯಕ್ತಿಯಾದ ಶ್ರೀ ಚಂದ್ರಾನಾಯ್ಕರವರ ಬಾಬ್ತು ಸರ್ವೇ ನಂ.71/7ರಲ್ಲಿನ ಜಮೀನಿನಲ್ಲಿ ಕೊಳವೆಬಾವಿ ಕೊರೆಸಿ ಕರ್ತವ್ಯಲೋಪವೆಸಗಿರುವುದು ಕಂಡುಬರುತ್ತದೆ. ಅಲ್ಲದೇ, ಆ.ಸ.ನೌ–2/ಡಿ.ಡಬ್ಲ್ಯು–1ರವರು ತಮ್ಮ ಪಾಟೀ ಸವಾಲಿನಲ್ಲಿ ಈ ರೀತಿ ನುಡಿದಿರುತ್ತಾರೆ.

> **"ನಾನು ಸಾಮ್ಯನಾಯ್ಕರವರಿಗೆ ಸೇರಿದ ಜಮೀನು ಸರ್ವೇ ನಂ.71ರಲ್ಲಿ 1 ಎಕರೆ 39 ಗುಂಟೆ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು ನಕಲಿ ಮಾಡಿ, 71ರ ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಬೆಸ್ಕಾಂ ಸಂಸ್ಥೆಗೆ ಶಿಫಾರಸ್ಸು ಮಾಡಿರುತ್ತೇನೆ ಎಂದರೆ ಸರಿ"**.

24) ಈ ರೀತಿ ನುಡಿದಿರುವುದನ್ನು ಪರಿಶೀಲಿಸಿದಾಗ, ಈ ಆ.ಸ.ನೌ.ರವರುಗಳು ದೂರುದಾರರ ತಂದೆಯ ಹೆಸರಿನಲ್ಲಿನ ಜಮೀನಿನ ಕಂದಾಯ ದಾಖಲೆಗಳ ಆಧಾರದ ಮೇಲೆ ಚಂದ್ರನಾಯ್ಕರವರ ಜಮೀನಿನಲ್ಲಿ ಕೊಳವೆಬಾವಿ ತೋಡಿಸಿ ಅದಕ್ಕೆ ಪೂರಕವಾಗಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮೆಸ್ಕಾಂ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದು ರುಜುವಾತಾಗುತ್ತದೆ. 2ನೇ ಆ.ಸ.ನೌ.ರವರು ಆಗಿರುವ ಈ ಪ್ರಮಾದವನ್ನು ತಮ್ಮ ರಕ್ಷಣಾ ಹೇಳಿಕೆಯಲ್ಲಿ ಒಪ್ಪಿಕೊಂಡಿರುತ್ತಾರೆ. ಆದರೆ, ಕಣ್‌ತಪ್ಪಿನಿಂದ ಈ ಪ್ರಮಾದವಾಗಿರುವುದಾಗಿ ಹೇಳಿರುತ್ತಾರೆ. ಆದರೆ, ಈ ಆ.ಸ.ನೌ.ರವರುಗಳು ಜಿಲ್ಲಾ ವ್ಯವಸ್ಥಾಪಕರು ಮತ್ತು ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಾಗಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಕರ್ತವ್ಯ ನಿರ್ವಹಿಸುವಾಗ ಫಲಾನುಭವಿಗಳ ಆಯ್ಕೆ ಸಂಬಂಧವಾಗಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಪರಿಪಾಲಿಸದೇ ಗಂಭೀರ ಸ್ವರೂಪದ ದುರ್ನಡತೆ ಎಸಗಿರುವುದು ರುಜುವಾತಾಗುತ್ತದೆ. ಅಲ್ಲದೇ, ಈ ಬಗ್ಗೆ 2ನೇ ಆ.ಸ.ನೌ.ರವರು ನಿಪಿ–5(17) ದೃಢೀಕರಣ

ಪತ್ರವನ್ನು ಮೆಸ್ಕಾಂ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿಕೊಂಡಿರುವುದೂ ಸಹ ರುಜುವಾತಾಗಿರುತ್ತದೆ.

25) ಕಾರಣ, ಶಿಸ್ತು ಪ್ರಾಧಿಕಾರದವರು ಆ.ಸ.ನೌ ರವರುಗಳು ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. ಆ.ಸ.ನೌರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(ii) ರಿಂದ (iii) ರಡಿಯಲ್ಲಿ ಆ.ಸ.ನೌ.1 ಮತ್ತು 2 ರವರು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ **ಸಂಭವನೀಯತೆ** (probabalities) ಕಂಡು ಬರುತ್ತದೆ. **ಈ ಎಲ್ಲಾ ಕಾರಣಗಳಿಂದ ಅಂಶ ನಂ.1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

*ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ* (1)ಶ್ರೀ ಆರ್.ಶೇಖರಪ್ಪ, ನಿವೃತ್ತ ಜಿಲ್ಲಾ ವ್ಯವಸ್ಥಾಪಕರು ಮತ್ತು (2)ಶ್ರೀ.ಹೆಚ್.ವಿ.ದಾಮೋದರ, ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಿಕ್ಕಮಗಳೂರು *ರವರ ವಿರುದ್ಧ ಹೊರಿಸಲಾದ ಆರೋಪವನ್ನು* ***ರುಜುವಾತುಪಡಿಸಲಾಗಿದೆ*** *ಎಂದು ನಿರ್ಣಯಿಸಲಾಗಿದೆ.*

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

12ನೇ ಡಿಸೆಂಬರ್ 2019

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.